# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI





ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 10 Reg. No. : KARBIL / 2005 / 16123 ಡಿಸೆಂಬರ್ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ 12 ಪ್ರಕಟಣೆ : 9-12-2021


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ




ಮಂಗಳೂರು ನಿವಾಸಿ ಶ್ರೀಮತಿ ಪ್ರಭಾ ಮತ್ತು ಕಾಂತಾವರ ಶ್ರೀ ಪ್ರಭಾಕರ ರಾವ್, ಉಪಾಧ್ಯಕ್ಷರು ಎಂ.ಸಿ.ಎಫ್. ಇವರು ತಮ್ಮ ಹೆತ್ತವರಾದ ಕಾಂತಾವರ ಶ್ರೀ ಭೋಜ ರಾವ್ ಮತ್ತು ಶ್ರೀಮತಿ ಸುಂದರಿ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **5,00,000/-** ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆಯನ್ನು ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಈ ಸಂದರ್ಭದಲ್ಲಿ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ ಮತ್ತು ಶ್ರೀಮತಿ ಸುಮನಾ ಕೃಷ್ಣ ತಮ್ಮ ಮಾತಾ-ಪಿತರಾದ ಕಾಸರಗೋಡು ಕುಂಬ್ಳೆ ಅನಂತಪುರ ಶ್ರೀ ಶಂಕರನಾರಾಯಣಯ್ಯ ಮತ್ತು ಶ್ರೀಮತಿ ರಾಧಮ್ಮ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** ದೇಣಿಗೆಯನ್ನು ಶ್ರೀ ಸಭಾದ 'ದೀಪಾವಳಿ ಕಾರ್ಯಕ್ರಮ'ದಂದು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾ ಶ್ರೀನಿವಾಸ್ ಉಪಸ್ಥಿತರಿದ್ದರು.





ಮುಲ್ಕಿ ನಿವಾಸಿ ಡಾ| ಬಿ. ಎಚ್. ರಾಘವ ರಾವ್‌ರವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' - ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **50,000/-** ದೇಣಿಗೆ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಅವರ ಪತ್ನಿ ಶ್ರೀಮತಿ ಸುಮತಿ ರಾವ್, ಸುಪುತ್ರ ಡಾ| ಸಂದೀಪ್ ರಾವ್, ಶ್ರೀಮತಿ ಹರ್ಷಿತಾ ರಾವ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣಾಕರ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜೊತೆಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ನಿರ್ದೇಶಕರು ಶ್ರೀ ರಘುವೀರ್ ರಾವ್ ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ತಮ್ಮ ತಂದೆಯವರಾದ ಶ್ರೀ ನವೀನ್‌ಕುಮಾರ್ ಸ್ಮರಣಾರ್ಥ ಅವರ ಪುತ್ರಿ ಶ್ರೀಮತಿ ಸುಷ್ಮಾ, ಅಳಿಯ ಶ್ರೀ ಶಿವಾನಂದ ರಾವ್ ದುಬೈ, ಮತ್ತೋರ್ವ ಪುತ್ರಿ ರೇಷ್ಮಾ, ಅಳಿಯ ಶ್ರೀ ವಸಂತ್‌ಕುಮಾರ್ ಹಾಗೂ ಪತ್ನಿ ಶ್ರೀಮತಿ ಕುಸುಮಾ ನವೀನ್ ಕುಮಾರ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **25,000/-** ದೇಣಿಗೆಯನ್ನು ನೀಡಿದ್ದಾರೆ. ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ತಮ್ಮ ಪತಿ ಶ್ರೀ ಪಿ. ಪ್ರಭಾಕರ್ ರಾವ್ ಸ್ಮರಣಾರ್ಥ ರೂ. **7,000/-** ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಈ ಸಂದರ್ಭದಲ್ಲಿ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಸಂತೋಷ್ ಯು., ಡಾ| ಜಯಲಕ್ಷ್ಮೀ, ಶ್ರೀಮತಿ ವೈಜಯಂತಿ ಬೆಳ್ಳೆ ಉಪಸ್ಥಿತರಿದ್ದರು.

### ನಿಮ್ಮ ಹರಕೆ, ಹಾರೈಕೆ - ನಮಗೆ ಶ್ರೀರಕ್ಷೆ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. **2-12-2021**ರಂದು
ನಮ್ಮ ಕಿರಿಯ ಪುತ್ರ ಚಿ| ಅನಿಕೇತ್ ಮತ್ತು ಚಿ| ಸೌ| ಆಕಾಂಕ್ಷ
ಇವರ ಮದುವೆ **ಆರತಕ್ಷತೆಗೆ** ಆಗಮಿಸಿ
ನೂತನ ವಧೂ-ವರರನ್ನು ಹರಸಿ ಶುಭ ಕೋರಿದ
ಸರ್ವ ಸಮಾಜ ಬಾಂಧವರಿಗೂ ಹೃತ್ಪೂರ್ವಕ ವಂದನೆಗಳು.

ಶ್ರೀಮತಿ ಉಷಾ ಮತ್ತು ಶ್ರೀ ನಟರಾಜ್ ಪಲಿಮಾರ್
ಶ್ರೀ ಅಭಿಷೇಕ್ ಮತ್ತು ಶ್ರೀಮತಿ ಕಾವ್ಯ (ಹಿರಿಯ ಪುತ್ರ ಮತ್ತು ಸೊಸೆ)

- ನಿಜವಾದ ಸೋಲು ಪ್ರತಿಸ್ಪರ್ಧಿಗಳಿಂದ ಸಂಭವಿಸುವ ಪರಾಜಯವಲ್ಲ. ನಮ್ಮಲ್ಲಿ, ನಮ್ಮ ಸಾಹಸದಲ್ಲಿ, ನಮ್ಮ ಶ್ರದ್ಧೆಯಲ್ಲಿ ನಮಗೆ ನಂಬಿಕೆ ಹೋಗುವುದು.
- ವರ್ತಮಾನಕ್ಕಾಗಿ ಜೀವಿಸುತ್ತಾ, ಭವಿಷ್ಯತ್ತಿಗೆ ಸಿದ್ಧತೆ ಮಾಡಿಕೊಳ್ಳದೆ ಇದ್ದರೆ ಪಶ್ಚಾತ್ತಾಪ ತಪ್ಪದು.

**ಜ್ಞಾನಶಕ್ತಿ ಮಾಸಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್ ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ


## ಶ್ರೀ ಸಭಾದಲ್ಲಿ ನಡೆದ ದೀಪಾವಳಿ ಆಚರಣೆಯ ಸಾಂಪ್ರದಾಯಿಕ ಉಡುಗೆ ಸ್ಪರ್ಧಾ ವಿಜೇತರು

**1ರಿಂದ 8 ವರ್ಷದ ಹುಡುಗರ ವಿಭಾಗ**
ಪ್ರಥಮ : ಆದೀಶ್
ದ್ವಿತೀಯ : ಹರ್ಷಿತ್

**9ರಿಂದ 15 ವರ್ಷದ ಹುಡುಗಿಯರ ವಿಭಾಗ**
ಪ್ರಥಮ : ಆರಾಧ್ಯ
ದ್ವಿತೀಯ : ಆಕಾಂಕ್ಷ

**16 ವರ್ಷ ಮೇಲ್ಪಟ್ಟ ಮಹಿಳಾ ವಿಭಾಗ**
ಪ್ರಥಮ : ಶಶಿಕಲಾ
ದ್ವಿತೀಯ : ಸೌಮ್ಯ ಮತ್ತು ರತ್ನಾ ಭಟ್

**16 ವರ್ಷ ಮೇಲ್ಪಟ್ಟ ಗಂಡಸರ ವಿಭಾಗ**
ಪ್ರಥಮ : ಬಿ. ಎಸ್. ಅನಿಲ್ ರಾವ್
ದ್ವಿತೀಯ : ಹರ್ಷಕುಮಾರ್ ಕೇದಿಗೆ

## ದಾಸಶ್ರೇಷ್ಠ ಶ್ರೀ ರಾಮಕೃಷ್ಣ ಕಾಟುಕುಕ್ಕೆಯವರಿಗೆ ಗಡಿನಾಡ ಕನ್ನಡ ರಾಜ್ಯೋತ್ಸವ ಪ್ರಶಸ್ತಿ



ಗಡಿನಾಡ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯು ಈ ಬಾರಿ ನಮ್ಮವರೇ ಆದ ದಾಸಶ್ರೇಷ್ಠ ಶ್ರೀ ರಾಮಕೃಷ್ಣ ಕಾಟುಕುಕ್ಕೆ ಇವರಿಗೆ ಅರ್ಹವಾಗಿಯೇ ಒಲಿದು ಬಂದಿದೆ. ಶ್ರೀಯುತರು ಭಜನಾ ಸಂಕೀರ್ತನೆಯಲ್ಲಿ ಪ್ರೌಢಿಮೆಯನ್ನು ಹೊಂದಿರುವುದಲ್ಲದೇ 300ಕ್ಕೂ ಅಧಿಕ ಭಜನಾ ಸಂಘಗಳನ್ನು ಹುಟ್ಟುಹಾಕಿ ಸನಾತನಿಗಳಲ್ಲಿ ಭಜನೆಯ ಸ್ಫೂರ್ತಿಯನ್ನು ತುಂಬಿ ಈ ಮೂಲಕ ಸಂಸಾರಗಳು ಹಾಗೂ ಸಮಾಜದಲ್ಲಿ ವಿಭಜನೆಯು ಉಂಟಾಗದಂತೆ ಶ್ರೇಷ್ಠ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬಂಟ್ವಾಳ ವಲಯ – ವಿಟ್ಲ ಇದರ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳ ಪ್ರೇರಕ ಶಕ್ತಿಯಾಗಿದ್ದಾರೆ.

ತಾಯಿ ಶಾರದೆ ಹಾಗೂ ಶೃಂಗೇರಿ ಗುರುಪರಂಪರೆಯು ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಅವರ ಕುಟುಂಬವನ್ನು ಸದಾ ಯಶಸ್ಸಿನತ್ತ ಮುನ್ನಡೆಸುವಲ್ಲಿ ಹಾರೈಸುತ್ತಿರಲಿ ಎಂಬ ಸದಾಶಯದೊಂದಿಗೆ 'ಜ್ಞಾನಶಕ್ತಿ' ಬಳಗವು ಅವರನ್ನು ಅಭಿನಂದಿಸುತ್ತದೆ.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಪ್ರಾಯೋಜಿತ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಪುತ್ತೂರಿನ 'ಶಿವಸದನ'ವು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದಲ್ಲಿ ಆರಂಭಿಸಿರುವ ಹಿರಿಯ ನಾಗರಿಕರ ವಸತಿಗೃಹ ನೂತನ ಯೋಜನೆಗೆ ಸಮಾಜ ಬಾಂಧವರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಶ್ರೀ ಸಭಾದ ಸಮಾಜಮುಖೀ ಕಾರ್ಯಕ್ಕೆ ಧನಸಹಾಯವನ್ನು ನೀಡಿ ಉತ್ಸಾಹ ತುಂಬಿ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಇವರ ಈ ಕಾರ್ಯವು ಇತರರಿಗೂ ಪ್ರೇರಣೆಯನ್ನು ನೀಡಲಿ ಹಾಗೂ ಶ್ರೀ ಸಭಾದ ನೂತನ ಯೋಜನೆಗಳಿಗೆ ಇನ್ನಷ್ಟು ನೆರವು ಹರಿದು ಬರಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿ ಹಾರೈಸುತ್ತಿದೆ.

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 20ಕ್ಕೂ ಹೆಚ್ಚು ನಿವಾಸಿಗಳಿದ್ದು, ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಈ ಮಾಹಿತಿಯನ್ನು ನೀಡಿ, ಸಹಕರಿಸಿ.

**ಸಂಪರ್ಕಿಸಿ :** ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359
ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598

## 'ಮಾರೀಚ'



ರಾಮಾಯಣದ ಮಾರೀಚ ರಾಕ್ಷಸನ ಹೆಸರೇ ಅರ್ಥಪೂರ್ಣವಾಗಿದೆ. 'ಮಾರೀಚ' ಎಂದರೆ ಮರೀಚಿಗೆ ಸಂಬಂಧಿಸಿದಾತ. ಆ ಹೆಸರಿನ ಋಷಿಯ ಅಪತ್ಯ–ಎಂದು ಕಥೆಯಿದ್ದರೂ ಮರೀಚಿ ಪದ – ಕಿರಣ, ಮನಮೋಹಿಸುವ ಕಿರಣವಿಲಾಸ, ಪ್ರಕಾಶದ ಆಟ, ಕಣ್ಮಸಕು ಎಂಬರ್ಥವನ್ನು ಕೊಡುತ್ತದೆ. ಈ ಪ್ರಕಾರ ಬಿಸಿಲುಗುದುರೆಗೆ ಮೃಗಮರೀಚಿಕೆ ಎಂಬ ಹೆಸರೂ ಇದೆ.


RAJESH POWER PRESS
The RIGHT Place for the Customer
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ಧ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಆಚರಣೆ




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 6–11–2021ರ ಶನಿವಾರ ದೀಪಾವಳಿ ಆಚರಣೆ ವಿಜೃಂಭಣೆಯಿಂದ ನಡೆಯಿತು. ದೀಪಪ್ರಜ್ವಲನೆ ಬಳಿಕ ಪ್ರಾರ್ಥನೆಯನ್ನು ಧನಲಕ್ಷ್ಮೀ ಹಾಗೂ ಸ್ವಾಗತಗೀತೆಯನ್ನು ಶ್ರೀಮತಿ ಮಂಜುಳ ಮುರಳೀಧರ್, ಶ್ರೀಮತಿ ಉಷಾ ನಟರಾಜ್, ಶ್ರೀಮತಿ ಜಯಂತಿ ವಿನೋದ್ ಹಾಡಿದರು. ಧಾರ್ಮಿಕ ಉಪನ್ಯಾಸವನ್ನು ಶ್ರೀ ಪಿ. ಪ್ರಭಾಕರ್ ರಾವ್, ಉಪಾಧ್ಯಕ್ಷರು, ಎಂ.ಸಿ.ಎಫ್. ಇವರು ನೀಡಿದರು. ಬಳಿಕ ವಿನೋದಾತ್ಮಕ ಆಟಗಳು, ಸಾಂಪ್ರದಾಯಿಕ ಉಡುಗೆ ಸ್ಪರ್ಧೆಗಳು ನಡೆದವು. ತೀರ್ಪುಗಾರರಾಗಿ ಶ್ರೀ ಜನಕರಾಜ್, ಶ್ರೀಮತಿ ಶಾರದಾ ಉದಯಭಾಸ್ಕರ ಸಹಕರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಅನುರಾಧಾ ರಾವ್ ನಿರ್ದೇಶನದಲ್ಲಿ 26 ಸದಸ್ಯರ ಆಕರ್ಷಕ ನೃತ್ಯ ಪ್ರದರ್ಶನ ನಡೆಯಿತು. ದೀಪದ ಮುಂಭಾಗದಲ್ಲಿ ಆಕರ್ಷಕ ರಂಗೋಲಿ ಬಿಡಿಸಿದ ಶ್ರೀ ನಾಗರಾಜ್ ಶರ್ಮರಿಗೆ ಮತ್ತು ಶ್ರೀಮತಿ ಅನುರಾಧಾ ರಾವ್‌ರವರಿಗೆ ಗೌರವ ಸಲ್ಲಿಸಲಾಯಿತು. ಸಾಮೂಹಿಕ ದಾಂಡಿಯಾ ನೃತ್ಯದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್, ಡಾ। ಜಯಲಕ್ಷ್ಮೀ, ಯುವವೇದಿಕೆ ಪದಾಧಿಕಾರಿಗಳಾದ ಶ್ರೀ ಮನೀಷ್ ಯು., ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ ಸಹಕರಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.

*(ಚಿತ್ರ : ರಘುವೀರ್ ಪೆರ್ಡೂರು)*

Land® Trades
BUILDERS & DEVELOPERS

# ಲ್ಯಾಂಡ್ ಟ್ರೇಡ್ಸ್‌ನಿಂದ ಪ್ರೀಮಿಯಂ ವಸತಿ ಅಪಾರ್ಟ್‌ಮೆಂಟ್

ತನ್ನ ದ್ವಿತೀಯ ಗಗನಚುಂಬಿ ಯೋಜನೆಯಾದ 'ಅಲ್ಟುರಾ' ಪ್ರಾರಂಭದ ಬೆನ್ನಲ್ಲೇ ಲ್ಯಾಂಡ್ ಟ್ರೇಡ್ಸ್ ಇದೀಗ ಮಂಗಳೂರು ಉರ್ವ ಮಾರಿಗುಡಿ ರಸ್ತೆಯಲ್ಲಿ ಪ್ರೀಮಿಯಂ ವಸತಿ ಅಪಾರ್ಟ್‌ಮೆಂಟ್ ಸಂಕೀರ್ಣವಾದ 'ಅದಿರಾ'ಗೆ ಚಾಲನೆ ನೀಡಿದೆ.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೆ. ಶ್ರೀನಾಥ ಹೆಬ್ಬಾರ್ ಅವರ ಉಪಸ್ಥಿತಿಯಲ್ಲಿ ಬುಧವಾರ ಬೆಳಗ್ಗೆ ಭೂಮಿ ಪೂಜೆಯೊಂದಿಗೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತು. ಕಾರ್ಪೋರೇಟರ್ ಶ್ರೀ ಗಣೇಶ್ ಕುಲಾಲ್ ಶಿಲಾನ್ಯಾಸ ಮತ್ತು ಭೂಮಿಪೂಜೆಯನ್ನು ಶ್ರೀ ಸುದರ್ಶನ ಮಯ್ಯ ನೆರವೇರಿಸಿದರು.

ಶ್ರೀ ಮೋಹನ್ ಅಮೀನ್, ಶ್ರೀ ಯು. ಚಂದ್ರಹಾಸ್, ಶ್ರೀ ಸುಮನ್ ಕುಮಾರ್, ಶ್ರೀ ಅನಿಲ್ ಹೆಗ್ಡೆ, ವಾಸ್ತುಶಿಲ್ಪಿ ಶ್ರೀ ಗೋಕುಲ್ ರಾಜ್, ಲ್ಯಾಂಡ್ ಟ್ರೇಡ್ಸ್ ಸಂಸ್ಥೆಯ CEO ಶ್ರೀ ರಮೀತ್ ಕುಮಾರ್ ಸಿದ್ಧಕಟ್ಟೆ ಮತ್ತಿತರರು ಉಪಸ್ಥಿತರಿದ್ದರು. ರೇರಾ ಅನುಮೋದಿತ ಈ ಯೋಜನೆಗೆ ಮುಂಗಡ ಬುಕ್ಕಿಂಗ್ ಲಭ್ಯ. ಆಸಕ್ತ ಗ್ರಾಹಕರು ಸೈಟ್ ವಿಸಿಟ್ ಮತ್ತು ಹೆಚ್ಚಿನ ಮಾಹಿತಿಗಾಗಿ ಲ್ಯಾಂಡ್ ಟ್ರೇಡ್ಸ್ ಸಂಸ್ಥೆಯನ್ನು ಸಂಪರ್ಕಿಸಬಹುದು.

**'ಅದಿರಾ' ಐಷಾರಾಮಿ ಜೀವನದ ಪ್ರತೀಕ**

'ಅದಿರಾ' ವಸತಿ ಸಮುಚ್ಚಯವು ಶ್ರೀ ಮಾರಿಯಮ್ಮ ದೇವಸ್ಥಾನ ಸಮೀಪ ನಿರ್ಮಾಣವಾಗಲಿದೆ. ನೆಲ ಮತ್ತು ನಾಲ್ಕು ಅಂತಸ್ತಿನ ಈ ವಸತಿ ಕಟ್ಟಡದಲ್ಲಿ 1,695, 1,720 ಮತ್ತು 1,845 ಚದರ ಅಡಿ ವಿಸ್ತೀರ್ಣದ ಮೂರು ಬೆಡ್‌ರೂಂನ 16 ಅಪಾರ್ಟ್‌ಮೆಂಟ್‌ಗಳಿರಲಿವೆ, ನೆಲ ಅಂತಸ್ತಿನ ರಸ್ತೆ ಪಕ್ಕದ ಮುಂಭಾಗವು ಅಂಗಡಿ / ವಾಣಿಜ್ಯ ಸಂಸ್ಥೆಗಳಿಗೆ ಮೀಸಲಿಡಲಾಗಿದೆ.

ಜಾಗದ ಅತ್ಯುತ್ತಮ ಬಳಕೆ, ನೈಸರ್ಗಿಕ ವಾತಾಯನ ಮತ್ತು ಸೂರ್ಯನ ಬೆಳಕಿನ ಹರಿವಿನೊಂದಿಗೆ ಲಿವಿಂಗ್‌ರೂಂ, ಬೆಡ್‌ರೂಂ, ಸ್ನಾನಗೃಹಗಳು, ಅಡುಗೆಕೋಣೆ ಮತ್ತು ಬಾಲ್ಕನಿಗಳು ಜೀವನೋಲ್ಲಾಸವನ್ನು ಹೆಚ್ಚಿಸುವಂತೆ ಪರಿಪೂರ್ಣವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ಲ್ಯಾಂಡ್ ಟ್ರೇಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೆ. ಶ್ರೀನಾಥ ಹೆಬ್ಬಾರ್ ತಿಳಿಸಿದ್ದಾರೆ.




ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –

**G. K. KOLPE**

House No. 7-3-31-D1, 'Vaishnavi' (Upstairs)
Vadiraja 2nd Cross, Bailakere, Udupi - 576 101
**Mobile : 9449903002**

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀ ಹರಿಶ್ಚಂದ್ರ ಭಟ್ ಮತ್ತು ಶ್ರೀಮತಿ ಸುಗಂಧಿನಿಯವರ ಸುಪುತ್ರ **ಚಿ| ಜ್ಯೋತಿಶ್ಚಂದ್ರ** ಮತ್ತು ಶ್ರೀ ಮಹಾಬಲ ಮತ್ತು ಶ್ರೀಮತಿ ಜ್ಯೋತಿಲಕ್ಷ್ಮೀಯವರ ಸುಪುತ್ರಿ **ಚಿ| ಸೌ| ಶ್ವೇತಾ** ಇವರ ವಿವಾಹವು ತಾ. 22–11–2021ನೇ ಸೋಮವಾರ ಪಾವಂಜೆಯ ಸಭಾಂಗಣದಲ್ಲಿ ನೆರವೇರಿತು.

— — — —

ಎಲ್ಲೂರು ಶ್ರೀ ಎಸ್. ಸುರೇಂದ್ರ ಮತ್ತು ಶ್ರೀಮತಿ ರೇಣುಕಾರವರ ಸುಪುತ್ರಿ **ಚಿ| ಸೌ| ಪಾಯಲ್** ಮತ್ತು ಕುಡ್ವಿ ಶ್ರೀ ಸತೀಶ ರಾವ್ ಮತ್ತು ಶ್ರೀಮತಿ ಸಂಧ್ಯಾರವರ ಸುಪುತ್ರ **ಚಿ| ಅನ್ವೇಷ್**ರವರ ವಿವಾಹವು ತಾ. 29–11–2021ನೇ ಸೋಮವಾರದಂದು ಬೆಂಗಳೂರಿನ ಕೋಡಿಗೆ ಹಳ್ಳಿಯ 'ಶ್ರೀ ಜ್ಞಾನಶಕ್ತಿ ಮಂಟಪ'ದಲ್ಲಿ ನೆರವೇರಿತು.

— — — —

ಶ್ರೀ ನಟರಾಜ್ ಪಲಿಮಾರ್ ಮತ್ತು ಶ್ರೀಮತಿ ಉಷಾರವರ ಸುಪುತ್ರ **ಚಿ| ಅನಿಕೇತ್** ಹಾಗೂ ಶ್ರೀ ಮನಿಶಿ ಯಮದಗ್ನಿ ಮತ್ತು ಶ್ರೀಮತಿ ಸಂಗೀತಾರವರ ಸುಪುತ್ರಿ **ಚಿ| ಸೌ| ಆಕಾಂಕ್ಷ**ರವರ ವಿವಾಹವು ತಾ. 29–11–2021ನೇ ಸೋಮವಾರ ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ನೆರವೇರಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಪುತ್ತಿಗೆ ನೆಲ್ಲಿಗುಡ್ಡೆ ಸುಬ್ಬಯ್ಯಕಟ್ಟೆ ನಿವಾಸಿ **ಶ್ರೀ ಕೆ. ಕೃಷ್ಣ ರಾವ್** (72) ತಾ. 1–12–2021ನೇ ಬುಧವಾರ ನಿಧನ ಹೊಂದಿದರು. ಶ್ರೀಯುತರು ಮಹತೋಭಾರ ಶ್ರೀ ಸೋಮನಾಥನ ಸನ್ನಿಧಿಯಲ್ಲಿ 40 ದಶಕಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದು, ಊರ ಪರವೂರ ಭಕ್ತರಿಗೆ ದೇವಕಾರ್ಯ ಭಟ್ಟರು ಎಂದೇ ಖ್ಯಾತರಾಗಿದ್ದರು.

***

**ನಾರಾವಿ ಶ್ರೀ ಮೋಹನ ರಾವ್** (60) ತಾ. 23–11–2021ನೇ ಮಂಗಳವಾರ ಅಲ್ಪಕಾಲದ ಅಸೌಖ್ಯದಿಂದಾಗಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

## ** ಅಪಾರ ಕೀರ್ತಿ ಗಳಿಸಿ **




ಕದ್ರಿಯ ಹರಿಪ್ರಸಾದ್ ರಾವ್ ಮತ್ತು ಸ್ವರ್ಣಗೌರಿ ದಂಪತಿಗಳ ಸುಪುತ್ರ ಬಿ. ಎಚ್. ಪ್ರಣವ್ ರಾವ್, ನ್ಯಾಷನಲ್ ಕ್ರಿಕೆಟ್ ಲೀಗ್ (NCL India)ನಿಂದ ಆಯ್ಕೆಯಾದ ಹದಿನಾಲ್ಕು ವರ್ಷದೊಳಗೆ ಕರ್ನಾಟಕ ರಾಜ್ಯದ ಕ್ರಿಕೆಟ್ ತಂಡಕ್ಕೆ ಆಲ್‌ರೌಂಡರ್ ಆಗಿ ಆಯ್ಕೆಯಾಗಿರುತ್ತಾರೆ. ಇದರ ಎರಡನೇ ಹಂತದ ಆಯ್ಕೆಯ ಪ್ರಕ್ರಿಯೆಯು ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದಿತ್ತು. ಇನ್ನು 2022 ಫೆಬ್ರವರಿ ತಿಂಗಳಲ್ಲಿ ಉತ್ತರ ಭಾರತದಲ್ಲಿ ನಡೆಯುವ ರಾಷ್ಟ್ರಮಟ್ಟದ ಅಂತರ್‌ರಾಜ್ಯ ಕ್ರಿಕೆಟ್ ಪಂದ್ಯಗಳಲ್ಲಿ ಕರ್ನಾಟಕವನ್ನು ಇವರು ಪ್ರತಿನಿಧಿಸಲಿದ್ದಾರೆ. 20 ರಾಜ್ಯಗಳ ಟ್ರೋಫಿ ಪಡೆಯಲು ನಡೆಸುವ ಪಂದ್ಯಾವಳಿಯ ಕೊನೆಯ ಪಂದ್ಯವು ದೆಹಲಿಯಲ್ಲಿ ನಡೆಯಲಿದ್ದು, ಬಹುಮಾನ ವಿತರಣಾ ಸಮಾರಂಭದಲ್ಲಿ ಸಚಿನ್ ತೆಂಡೂಲ್ಕರ್ ಹಾಗೂ ಕಪಿಲ್‌ದೇವ್ ಭಾಗವಹಿಸುವ ನಿರೀಕ್ಷೆಯಿದೆ. ಪ್ರಣವ್ ಕ್ರಿಕೆಟ್ ತರಬೇತಿಯನ್ನು ಮೊದಲಿಗೆ ತಂದೆಯಿಂದ, ನಂತರ ಬಲ್ಮಠದ ಮಂಗಳೂರು ಕ್ರಿಕೆಟ್ ಅಕಾಡೆಮಿಯ (MCA) ಶ್ರೀ ರಾಜರತ್ನ ಇವರಲ್ಲಿ ಪಡೆಯುತ್ತಿದ್ದಾರೆ. ಇದಲ್ಲದೇ ಕಳೆದ ವಾರದಿಂದ ಹೆಚ್ಚಿನ ತರಬೇತಿಯನ್ನು ಮಂಗಳೂರು ಕ್ರಿಕೆಟ್ ಇಂಡಿಯಾ ಅಕಾಡೆಮಿ (MCIA)ಯಿಂದ ಸೈಂಟ್ ಅಲೋಶಿಯಸ್ ಸೆಂಟಿನರಿ ಮೈದಾನದಲ್ಲಿ ಪಡೆಯುತ್ತಿದ್ದಾರೆ.

### ಉದ್ಘಾಟನಾ ಕಾರ್ಯಕ್ರಮ

**ಡಾ| ಎಚ್. ಹರಿಹರ ಪ್ರಸಾದ್ ರಾವ್ ಹಾಗೂ**
**ಎಚ್. ಸೌಮ್ಯ ರಾವ್ ಇವರ**
**'ಈಶ್ವರೀ' ಆಯುರ್ವೇದ ಮೆಡಿಕಲ್ ಹಾಗೂ ಕ್ಲಿನಿಕ್**
ಇದರ ಉದ್ಘಾಟನಾ ಕಾರ್ಯಕ್ರಮವು
ತಾರೀಕು 24-11-2021ನೇ ಬುಧವಾರದಂದು
**ಶ್ರೀಮಾತಾ ರೆಸಿಡೆನ್ಸಿ, ಹಳೆಯಂಗಡಿಯಲ್ಲಿ**
ಬಂಧು–ಮಿತ್ರರ ಸಹಯೋಗದೊಂದಿಗೆ ನೆರವೇರಿತು.




**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್ ಹಾಗೂ**
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

*Prop. : P. Srikanth Rao*
Mobile : 9343361618
**M/s. SAMARPAN**
*HOUSE OF STATIONERY*
"Vijaya Nivas", Opp. Pio Mall
Bejai Church Road, Mangalore - 4



## ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರೆ
### ಇದರ ವಾರ್ಷಿಕ ಮಹಾಸಭೆ



ದಿನಾಂಕ 28–11–2021ನೇ ಭಾನುವಾರ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರ 2020–2021ನೇ ಸಾಲಿನ ಮಹಾಸಭೆ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಪ್ರಾಂಗಣದಲ್ಲಿ ಸರಳ ರೀತಿಯಲ್ಲಿ ನಡೆಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಎಂ. ಕೆ. ಮೋಹನ್ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಪಿ. ಬಿ. ವಾಸುದೇವ ರಾವ್, ಉಪಾಧ್ಯಕ್ಷರಾದ ಶ್ರೀರಾಮ ರಾವ್, ಶ್ರೀ ಮಾಧವ ರಾವ್, ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ, ಶ್ರೀಮತಿ ಸುಮಿತ್ರ ಸುಬ್ಬರಾವ್, ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್‌ರಾವ್, ಕೋಶಾಧಿಕಾರಿ ಶ್ರೀ ಅರವಿಂದ ರಾವ್, ಜೊತೆ ಕೋಶಾಧಿಕಾರಿ ಶ್ರೀಮತಿ ವೇದಾವತಿ ದಿವಾಕರ್ ರಾವ್, ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ ರಾವ್, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಜನಾರ್ದನ ರಾವ್ ಉಪಸ್ಥಿತರಿದ್ದರು.

ಶ್ರೀಮತಿ ಶುಭಾ ಜನಾರ್ದನ ರಾವ್ ಹಾಗೂ ಶ್ರೀಮತಿ ವೇದಾವತಿ ದಿವಾಕರ್ ಅವರ ಪ್ರಾರ್ಥನೆಯೊಂದಿಗೆ ದೀಪ ಬೆಳಗಿಸಿ ಸಭೆ ಆರಂಭಗೊಂಡಿತು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಸ್ವಾಗತಿಸಿ, ಕಾರ್ಯದರ್ಶಿ ಶ್ರೀಮತಿ ರಮ್ಯ ಅರುಣ್ ವರದಿ ಮಂಡಿಸಿ, ಕೋಶಾಧಿಕಾರಿ ಶ್ರೀ ಅರವಿಂದ ರಾವ್ ಲೆಕ್ಕಪತ್ರ ಮಂಡಿಸಿದರು. ಸದಸ್ಯರೆಲ್ಲರ ಚಪ್ಪಾಳೆ ಮೂಲಕ ಅನುಮೋದನೆ ಪಡೆಯಲಾಯಿತು.

ಈ ಸಂದರ್ಭದಲ್ಲಿ ಶೈಕ್ಷಣಿಕ ಪ್ರತಿಭಾ ಪುರಸ್ಕಾರದ ಪ್ರಯುಕ್ತವಾಗಿ S.S.L.C. ಹಾಗೂ PUCಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾದ ಕುಮಾರಿ ಅಪೇಕ್ಷಾ, ಕುಮಾರಿ ಮೇಘನಾ, ಕುಮಾರಿ ಖುಷಿ ಇವರಿಗೆ ಪ್ರಶಸ್ತಿ ಪತ್ರ, ಗೌರವಧನ ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಪದವಿಪೂರ್ವ ಹಾಗೂ ಉನ್ನತ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 17 ವಿದ್ಯಾರ್ಥಿಗಳಿಗೆ ರೂ. 1,25,000/– ಪ್ರೋತ್ಸಾಹಧನ ವಿತರಿಸಲಾಯಿತು. ಸಂಘವು ಹತ್ತು ವರ್ಷ ಪೂರೈಸಿರುವುದರಿಂದ ಮುಂದಿನ ವರ್ಷ ಅದ್ದೂರಿಯಾಗಿ ಮಹಾಸಭೆ ಹಾಗೂ ದಶಮಾನೋತ್ಸವ ಕಾರ್ಯಕ್ರಮವನ್ನು ಆಚರಿಸುವುದಾಗಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ. ಬಿ. ವಾಸುದೇವ ರಾವ್ ಹಾಗೂ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್ ತಿಳಿಸಿದರು ಹಾಗೂ ಸದಸ್ಯರೆಲ್ಲರು ಸಹಕರಿಸಬೇಕಾಗಿ ವಿನಂತಿಸಲಾಯಿತು. ದಾನಿಗಳ ಪಟ್ಟಿಯನ್ನು ಶ್ರೀಮತಿ ಪವಿತ್ರ ಕೃಷ್ಣ ರಾವ್ ವಾಚಿಸಿ, ಪ್ರೋತ್ಸಾಹಧನ ಪಟ್ಟಿಯನ್ನು ಶ್ರೀ ಜ್ಯೋತೀಂದ್ರನಾಥ್ ವೈ ನಿರ್ವಹಿಸಿ, ಪ್ರತಿಭಾ ಪುರಸ್ಕಾರವನ್ನು ಶ್ರೀಮತಿ ವಾಣಿ ಮಾಧವ ರಾವ್ ನೆರವೇರಿಸಿ, ಶ್ರೀ ಮಾಧವ ರಾವ್ ಇವರ ಧನ್ಯವಾದದೊಂದಿಗೆ ಶ್ರೀ ಎಂ. ಕೆ. ದಿವಾಕರ್ ರಾವ್ ಕಾರ್ಯಕ್ರಮ ಸಂಘಟಿಸಿ ಶ್ರೀ ಅರುಣ್ ರಾವ್ ಕಾರ್ಯಕ್ರಮ ನಿರೂಪಿಸಿದರು ಮತ್ತು ನಿರ್ದೇಶಕರೆಲ್ಲರೂ ಸಹಕರಿಸಿದರು.

## ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘದ 8ನೇ ವರ್ಷದ ಕ್ರಿಕೆಟ್ ಪಂದ್ಯಾಕೂಟ

ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘವು ಕಳೆದ 7 ವರ್ಷಗಳಿಂದ ಕ್ರಿಕೆಟ್ ಪಂದ್ಯಾಕೂಟವನ್ನು ನಮ್ಮ ಸಮಾಜ ಬಾಂಧವರಿಗಾಗಿ ನಡೆಸಿಕೊಂಡು ಬಂದಿರುತ್ತದೆ. ತನ್ನ **8ನೇ ವರ್ಷದ ಕ್ರಿಕೆಟ್ ಪಂದ್ಯಾಕೂಟವು** ದಿನಾಂಕ 26–12–2021ನೇ ಆದಿತ್ಯವಾರ NMPT ಪಣಂಬೂರು ಕ್ರೀಡಾಂಗಣದಲ್ಲಿ ನಡೆಸುವುದಾಗಿ ತೀರ್ಮಾನಿಸಿದ್ದೇವೆ. ಈ ಪಂದ್ಯಾಕೂಟಕ್ಕೆ ಆಗಮಿಸುವ ಕ್ರಿಕೆಟ್ ತಂಡವನ್ನು ದಿನಾಂಕ 18–12–2021ರ ಒಳಗೆ ನಮ್ಮ ಸಂಘಟಕರಿಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಪಂದ್ಯಾಕೂಟಕ್ಕೆ ಬರುವ ಆಟಗಾರರು ತಮ್ಮ ಆಧಾರ್ ಪ್ರತಿಯನ್ನು ತರಬೇಕು ಮತ್ತು ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

**ಸಂಘಟಕರು**

| ಕಾರ್ತಿಕ್ ರಾವ್ | ಪ್ರವೀಣ್ ಕುಮಾರ್ | ಸುಬ್ರಹ್ಮಣ್ಯ |
|---|---|---|
| 9591662899 | 9448953331 | 7259723326 |

ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್

ಓಂ

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ

**ಪಡುಬಿದ್ರೆ, ಉಡುಪಿ ಜಿಲ್ಲೆ - 574 111**

ಭಕ್ತಾಭಿಮಾನಿಗಳೇ,

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ
ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರರಾದ
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ
ಹಾಗೂ ತತ್ಕರಕಮಲಸಂಜಾತರಾದ
**ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ**
ಪರಮಾನುಗ್ರಹದಿಂದ

**ಸ್ವಸ್ತಿ। ಶ್ರೀ ಪ್ಲವ ನಾಮ ಸಂವತ್ಸರದ ಧನುರ್ಮಾಸ**
**ದಿನಾಂಕ 18-12-2021ರಿಂದ ದಿನಾಂಕ 2-1-2022ರ ವರೆಗೆ**
**ಪ್ರತೀ ದಿನ ರಾತ್ರಿ ಗಂಟೆ 7-30ಕ್ಕೆ**

## ಸಾಮೂಹಿಕ ರಂಗಪೂಜಾ ಸೇವೆಯು

**ಜರುಗಲಿರುವುದು.**

**ಹಾಗೂ**

**ಸ್ವಸ್ತಿ। ಶ್ರೀ ಪ್ಲವನಾಮ ಸಂವತ್ಸರದ ಧನುರ್ಮಾಸ ದಿನ ೧೮ ಸಲುವ,**
**ಮಾರ್ಗಶಿರ ಅಮಾವಾಸ್ಯೆ ದಿನಾಂಕ 2-01-2022ನೇ ರವಿವಾರದಂದು**

## ಎಳ್ಳಮಾವಾಸ್ಯೆ ಉತ್ಸವವು ಜರುಗಲಿರುವುದು.

**ಶ್ರೀ ದೇವತಾ ಕಾರ್ಯದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ,**
**ತನು–ಮನ–ಧನಗಳಿಂದ ಸಹಕರಿಸಿ, ಗಂಧ–ಪ್ರಸಾದವನ್ನು ಸ್ವೀಕರಿಸಿ,**
**ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಿದ್ದೇವೆ.**

| ಜಗದಾಭಿರಾಮ ಸ್ವಾಮಿ | ಪಿ. ರಘುವೀರ ರಾವ್ | ಕರುಣಾಕರ ಬೆಳ್ಳೆ |
|---|---|---|
| ಪ್ರಧಾನ ಅರ್ಚಕರು | ಅಧ್ಯಕ್ಷರು | ಗೌರವಾಧ್ಯಕ್ಷರು |
| ಶ್ರೀನಿವಾಸ ಶರ್ಮ, ಪಾದೆಬೆಟ್ಟು | ಪಿ. ಡಿ. ಶೇಖರ ರಾವ್ | |
| ಕಾರ್ಯದರ್ಶಿ | ಖಜಾಂಚಿ | |

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ಟೆಂಪಲ್ ಟ್ರಸ್ಟ್ (ರಿ.)
ಮತ್ತು ಸರ್ವ ಸದಸ್ಯರು, ಊರ ಹತ್ತು ಸಮಸ್ತರು

**ಶ್ರೀ ಕ್ಷೇತ್ರದಲ್ಲಿ**

**'ಪುಷ್ಪರಥ ಸಮರ್ಪಣೆ' ಮತ್ತು ಬ್ರಹ್ಮಕಲಶೋತ್ಸವವು**

**ಮುಂದೆ ಜರುಗಲಿದ್ದು ಈ ಎಲ್ಲಾ ಕಾರ್ಯಕ್ರಮಗಳಿಗೆ ಭಕ್ತ ಮಹಾಶಯರು**
**ಉದಾರ ಮನಸ್ಸಿನಿಂದ ತನು–ಮನ–ಧನದ ಸಹಾಯ ನೀಡಿ**
**ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

– ಆಡಳಿತ ಮಂಡಳಿ

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

**PREETHIKA AUTOMOBILES**
☎ 2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
***Dealers in :***
**Minda Switches, M. K. Products, Swiss Auto Products, Power Coils**

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ ವಾರ್ಷಿಕ ಮಹಾಸಭೆ

ದಿನಾಂಕ 14–11–2021ನೇ ಆದಿತ್ಯವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ ಇದರ 9ನೇ ವಾರ್ಷಿಕ ಮಹಾಸಭೆಯು ಮಲ್ಲಮಾರು ಶ್ರೀ ಭವಾನಿಶಂಕರ ರಾವ್ ಇವರ ಮನೆಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕೆ. ಮಾಧವ ರಾವ್ ವಹಿಸಿದ್ದರು. ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ, ಶ್ರೀ ವಾಸುದೇವ ಶ್ಯಾನುಭೋಗ್, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಶ್ರೀ ಶಿವಪ್ರಸಾದ್ ಶ್ಯಾನುಭೋಗ್, ಶ್ರೀ ಪ್ರವೀಣ್ ಕುಮಾರ್ ಮಲ್ಲಮಾರ್, ಕೋಶಾಧಿಕಾರಿ ಶ್ರೀ ರಾಘವೇಂದ್ರ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳಾ ಪ್ರಶಾಂತ್, ಯುವವೇದಿಕೆಯ ಉಪಾಧ್ಯಕ್ಷರಾದ ಶ್ರೀ ಕಾರ್ತಿಕ್ ರಾವ್ ಉಪಸ್ಥಿತರಿದ್ದರು. ಕುಮಾರಿ ಸಂಜನಾ ರಾವ್ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಸ್ವಾಗತಿಸಿದರು ಮತ್ತು ಗಣ್ಯರು ದೀಪಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆಕೊಟ್ಟರು.

ಅಗಲಿದ ನಮ್ಮ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ನರಸಿಂಹ ಭಂಡಿ ಹಾಗೂ ಸದಸ್ಯರಾದ ಶ್ರೀಮತಿ ಯಶೋದಾ ಕರುಣಾಕರ ಶರ್ಮ ಇವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮರವರು ವಾರ್ಷಿಕ ವರದಿಯನ್ನು ಮಂಡಿಸಿ ಅಂಗೀಕಾರವನ್ನು ಪಡೆದುಕೊಂಡರು. ಸಂಘದ ಕೋಶಾಧಿಕಾರಿ ಶ್ರೀ ಸಿ. ರಾಘವೇಂದ್ರ ರಾವ್‌ರವರು ಸಂಘದ ಆಯವ್ಯಯ ಮತ್ತು ಆಸ್ತಿ ಜವಾಬ್ದಾರಿಗಳ ಲೆಕ್ಕ ಪರಿಶೋಧಿತ ವರದಿಯನ್ನು ಸಭೆಯಲ್ಲಿ ಮಂಡಿಸಿ, ಅಂಗೀಕಾರವನ್ನು ಪಡೆದುಕೊಂಡರು ಹಾಗೂ ಮುಂದಿನ ವರ್ಷಕ್ಕಾಗಿ 'ಭಟ್ & ಶರ್ಮ'ರನ್ನು ಲೆಕ್ಕಪರಿಶೋಧಕರಾಗಿ ನೇಮಕ ಮಾಡಲಾಯಿತು.

ಶ್ರೀಮತಿ ಸುಮಂಗಲಾ ರಾವ್, ಉಪಮೇಯರ್, ಮಂಗಳೂರು ಮಹಾನಗರ ಪಾಲಿಕೆ, ವಿದ್ಯಾಕ್ಷೇತ್ರದಲ್ಲಿ ಸಾಧಕರಾದ ಶ್ರೀ ವೈ. ವಿ. ರತ್ನಾಕರ ರಾವ್, ಹಿರಿಯರಾದ ಶ್ರೀಮತಿ ಜಯಲಕ್ಷ್ಮೀ ಪ್ರಸನ್ನ ಕುಮಾರ್ ಹಾಗೂ ಶ್ರೀ ರಾಮಚಂದ್ರ ರಾವ್, ಯುವಪ್ರತಿಭೆ ಎಂದು ಗುರುತಿಸಿಕೊಂಡ ಶ್ರೀ ರವಿಕುಮಾರ್ ಹಳೆಯಂಗಡಿಯವರನ್ನು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಸನ್ಮಾನಿಸಿದರು.

ಬಳಿಕ ಎಸ್.ಎಸ್.ಎಲ್.ಸಿ., ಪಿಯುಸಿ, ಪದವಿಪೂರ್ವ ಹಾಗೂ ಉನ್ನತ ಶಿಕ್ಷಣವನ್ನು ಓದುತ್ತಿರುವ ವಿದ್ಯಾರ್ಥಿಗಳಿಗೆ ದಾನಿಗಳು ನೀಡಿದ ಮೊತ್ತ ಹಾಗೂ ಅದರ ಬಡ್ಡಿಯಿಂದ ಬರುವ ಹಣದಿಂದ ಸುಮಾರು 29 ಮಕ್ಕಳಿಗೆ ಪ್ರೋತ್ಸಾಹಧನವನ್ನು ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದ ವಿವರವನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶ್ಯಾನುಭೋಗ್ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಮುಖ್ಯ ಅತಿಥಿಗಳನ್ನು ಗೌರವಿಸಲಾಯಿತು ಹಾಗೂ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾಸ್ಟರ್ ಅಭಿಷೇಕ್ ಎಂ. ಇವರು ಸಂಘದಿಂದ ತನಗಾದ ನೆರವನ್ನು ಸ್ಮರಿಸಿ ಸಂಘದ ವಿದ್ಯಾನಿಧಿಗೆ ರೂ. 10,000/–ಗಳನ್ನು ದೇಣಿಗೆ ನೀಡಿದರು. ಅಂತೆಯೇ ಹಿರಿಯರಾದ ಶ್ರೀ ವೈ. ವಿ. ರತ್ನಾಕರ್ ರಾವ್ ನಿವೃತ್ತ ಪ್ರಾಂಶುಪಾಲರು ಹಾಗೂ ಶ್ರೀಮತಿ ಸುಕನ್ಯಾ ರಾಜೇಂದ್ರ ಚಿತ್ರಾಪುರ ಇವರು ಸಂಘದ ವಿದ್ಯಾನಿಧಿಗೆ ತಲಾ ರೂ. 5,000/– ದೇಣಿಗೆ ನೀಡಿ ಪ್ರೋತ್ಸಾಹಿಸಿದರು ಹಾಗೂ ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರು ಈ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಈ ಎಲ್ಲಾ ಕಾರ್ಯಕ್ರಮಗಳನ್ನು ಸಂಘದ ಕೋಶಾಧಿಕಾರಿಯವರಾದ ಶ್ರೀ ರಾಘವೇಂದ್ರ ರಾವ್ ನಿರೂಪಿಸಿದರು. ಆಮೇಲೆ 2021–2023ರ ವರೆಗಿನ ಹೊಸ ಕಾರ್ಯಕಾರಿ ಸಮಿತಿಯ ರಚನೆಯನ್ನು ಪಡುಬಿದ್ರೆ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ ರಾವ್, ಬ್ರಹ್ಮಾವರ–ಬಾರ್ಕೂರು ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ರಾವ್ ಹಾಗೂ ವಿಶ್ವ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಉಪಾಧ್ಯಕ್ಷರಾದ ಶ್ರೀ ಉದಯ ಕುಮಾರ್ ರಾವ್ ನಡೆಸಿಕೊಟ್ಟರು. ಹೊಸ ಕಾರ್ಯಕಾರಿ ಸಮಿತಿಯು ಈ ಕೆಳಗಿನಂತಿವೆ.



ಸಂಘದ ಗೌರವಾಧ್ಯಕ್ಷರಾಗಿ ಶ್ರೀ ಭವಾನಿಶಂಕರ ರಾವ್, ಅಧ್ಯಕ್ಷರಾಗಿ ಶ್ರೀ ಕೆ. ಮಾಧವ ರಾವ್, ಉಪಾಧ್ಯಕ್ಷರಾಗಿ ಶ್ರೀ ಗೋಪಾಲಕೃಷ್ಣ ಮತ್ತು ಶ್ರೀ ವಾಸುದೇವ ಶ್ಯಾನುಭೋಗ್, ಕಾರ್ಯದರ್ಶಿಯವರಾಗಿ ಶ್ರೀ ಪಾಲಚಂದ್ರ ಶರ್ಮ, ಜೊತೆಕಾರ್ಯದರ್ಶಿಯವರಾಗಿ ಶ್ರೀ ರಾಜ್‌ಶೇಖರ ರಾವ್ ಮತ್ತು ಶಿವಪ್ರಸಾದ್ ಶ್ಯಾನುಭೋಗ್, ಕೋಶಾಧಿಕಾರಿಯವರಾಗಿ ಶ್ರೀ ಸಿ. ರಾಘವೇಂದ್ರ ರಾವ್, ಸಂಘಟನಾ ಕಾರ್ಯದರ್ಶಿಯವರಾಗಿ ಶ್ರೀ ಪ್ರವೀಣ್ ಕುಮಾರ್ ಮಲ್ಲಮಾರ್, ಶ್ರೀ ಸಂದೀಪ್ ಶ್ಯಾನುಭೋಗ್, ಶ್ರೀ ರಾಧಾಕೃಷ್ಣ ಪಡುಪಣಂಬೂರು, ಸದಸ್ಯರಾಗಿ ಶ್ರೀ ಹರಿನಾರಾಯಣ ರಾವ್, ಶ್ರೀ ಆನಂದ ರಾವ್, ಶ್ರೀಮತಿ ಸುಕನ್ಯಾ ಹರಿಶ್ಚಂದ್ರ ರಾವ್, ಶ್ರೀ ಸುದರ್ಶನ ರಾವ್, ಶ್ರೀ ಚಂದ್ರಶೇಖರ ರಾವ್ ಚಿತ್ರಾಪುರ, ಶ್ರೀಮತಿ ಉಮಾ ಎಸ್. ಶ್ಯಾನುಭೋಗ್, ಸಲಹಾ ಸಮಿತಿಯ ಸದಸ್ಯರಾಗಿ ಶ್ರೀ ವೈ. ವಿ. ರತ್ನಾಕರ ರಾವ್ ಹಾಗೂ ಶ್ರೀ ಸಿ. ಜಗದೀಶ್ ರಾವ್ ಇವರು ಆಯ್ಕೆಗೊಂಡರು.

2021–2023ನೇ ಸಾಲಿನ ಮಹಿಳಾ ವೇದಿಕೆಯ ಅಧ್ಯಕ್ಷರಾಗಿ ಶ್ರೀಮತಿ ಪರಿಮಳಾ ಪ್ರಶಾಂತ್, ಉಪಾಧ್ಯಕ್ಷರಾಗಿ ಶ್ರೀಮತಿ ವೀಣಾ ಅರವಿಂದ್, ಕಾರ್ಯದರ್ಶಿಯವರಾಗಿ ಶ್ರೀಮತಿ ಶರಣ್ಯ, ಜೊತೆ ಕಾರ್ಯದರ್ಶಿಯವರಾಗಿ ಶ್ರೀಮತಿ ಸುನೀತಾ ಶ್ರೀಕಾಂತ್, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಮತಿ ಶುಭಾ ಜೆ. ರಾವ್, ಶ್ರೀಮತಿ ರಾಜೇಶ್ವರಿ ವಿ. ರಾವ್, ಸಾಂಸ್ಕೃತಿಕ ವೇದಿಕೆಯ ಸದಸ್ಯರಾಗಿ ಶ್ರೀಮತಿ ಕುಸುಮಾ ಎಂ. ರಾವ್, ಶ್ರೀಮತಿ ಕ್ಷಮಾಗೌರಿ ಹರಿನಾರಾಯಣ ರಾವ್, ಸದಸ್ಯರಾಗಿ ಶ್ರೀಮತಿ ಸೌಮ್ಯ ಎಸ್. ರಾವ್, ಶ್ರೀಮತಿ ಸವಿತಾ ಶ್ಯಾನುಭೋಗ್, ಶ್ರೀಮತಿ ಭಾರ್ಗವಿ ಎಸ್. ರಾವ್ ಇವರು ಆಯ್ಕೆಗೊಂಡರು.

2021–2023ನೇ ಸಾಲಿನ ಯುವವೇದಿಕೆಯ ಅಧ್ಯಕ್ಷರಾಗಿ ಶ್ರೀ ಕಾರ್ತಿಕ್ ರಾವ್ ಐ. ಕೆ., ಉಪಾಧ್ಯಕ್ಷರಾಗಿ ಶ್ರೀ ಪವನ್ ಕುಮಾರ್ ಮತ್ತು ಕಾರ್ಯದರ್ಶಿಯವರಾಗಿ ಶ್ರೀ ಸುಬ್ರಹ್ಮಣ್ಯ ರಾವ್, ಜೊತೆಕಾರ್ಯದರ್ಶಿಯಾಗಿ ಶ್ರೀ ಅಶ್ವಿನ್, ಸದಸ್ಯರಾಗಿ ಶ್ರೀ ಶೋಧನ ಬಿ. ರಾವ್, ಶ್ರೀ ಪ್ರಜ್ವಲ್, ಶ್ರೀ ಸಂಪತ್ ಕುಮಾರ್, ಶ್ರೀ ಶಶಿಧರ್ ರಾವ್ ಚಿತ್ರಾಪುರ, ಶ್ರೀ ಕೆ. ಮಂಜುನಾಥ್ ರಾವ್, ಶ್ರೀ ಅಭಿಷೇಕ್ ಹಾಗೂ ಶ್ರೀ ಜನಕ ರಾಜ್ ಆಯ್ಕೆಗೊಂಡರು.

ಕುಮಾರಿ ಅಪರ್ಣಾ ಪಿ. ರಾವ್ ಹಾಗೂ ಕುಮಾರಿ ಸೌಜನ್ಯ ಪಿ. ಶರ್ಮರವರು ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಮಕ್ಕಳಿಗೆ ಕೆಲವೊಂದು ಆಟಗಳನ್ನು ಆಡಿಸಿ, ಬಹುಮಾನಗಳನ್ನು ನೀಡಲಾಯಿತು. ಶ್ರೀಮತಿ ವಿನಯ ರಾಜಶೇಖರ್ ರಾವ್ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

Prop. : *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

Muralidhara Rao Adyapadi
Proprietor
Mob : 94480 27259
99803 16434
**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
: 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
**SHIVAGIRI ENTERPRISES**

# ಶ್ರೀ ಪದ್ಮಪಾದರ ನೃಸಿಂಹಾವತಾರ

ಸನಾತನ ಧರ್ಮದ ಪುನರುತ್ಥಾನದ ಯುಗಪುರಷರಾದ ಜಗದ್ಗುರು ಶ್ರೀ ಶಂಕರಾಚಾರ್ಯರ ಮೇರುಕೃತಿಯಾದ ಶ್ರೀ ವಿದ್ಯಾರಣ್ಯ ಸ್ವಾಮಿ ವಿರಚಿತ 'ಶ್ರೀಮದ್ ಶಂಕರ ದಿಗ್ವಿಜಯಮ್' ಶ್ರೀ ಶಂಕರರ ಜೀವನದಲ್ಲಿಯ ಅನೇಕ ಪುರಾಣಸದೃಶ ಘಟನೆಗಳನ್ನೊಳಗೊಂಡಿದೆ. (Shankara Digvijayam – By Madhava Vidyaranya, Tr. Swami Tapasyananda, Chennai, 2nd ed. 2016) ಶಂಕರರ ಮೇಲಿನ ಎಲ್ಲಾ ಗ್ರಂಥಗಳೂ ಪ್ರಸ್ತಾಪಿಸುವಂತಹ ಒಂದು ವೃತ್ತಾಂತವೇ."

### ಶ್ರೀ ಪದ್ಮಪಾದರ ನೃಸಿಂಹಾವತಾರ

ಶ್ರೀ ಶಂಕರರು, ಗುರುಗೋವಿಂದ ಭಗವತ್ಪಾದರ ಆದೇಶದಂತೆ ವಾರಣಾಸಿಯಲ್ಲಿ ಕಾಶೀ ವಿಶ್ವನಾಥನ ಸನ್ನಿಧಿಯಲ್ಲಿ ಸ್ವಲ್ಪಕಾಲ ನೆಲೆನಿಂತರು. ಒಂದು ದಿನ ಓರ್ವ ಬ್ರಾಹ್ಮಣ ಅವರ ಬಳಿ ಬಂದು ಅವರಿಗೆ ಇಷ್ಟವಾಗುವ ಭಾಗ್ಯ ಕಲ್ಪಿಸಿ, ಸಂಸಾರ ಬಂಧನದಿಂದ ಬಿಡುಗಡೆಯಾಗಲು ಸನ್ಯಾಸದೀಕ್ಷೆ ಕರುಣಿಸಬೇಕೆಂದು ಬೇಡಿಕೊಂಡ, ಅವನ ಬಗ್ಗೆ ವಿವರ ಕೇಳಿದಾಗ, ಅವನು ದಕ್ಷಿಣದ ಚೋಳ ರಾಜ್ಯದಲ್ಲಿ ಕಾವೇರಿ ನದಿತೀರದಲ್ಲಿ ವಾಸಿಸುತ್ತಿದ್ದವನೆಂದೂ ತಿಳಿಯಿತು. ಅವನನ್ನು 'ಸನಂದನ' ಎಂದು ಕರೆದು, "ಸಂಸಾರ ಸಾಗರ ದಾಟುವ ನಾವೆಯಲ್ಲಿ ಕುಳ್ಳಿರಿಸಿ, ಅದರ ನಾವಿಕರಾದರು." ಹಾಗೆಯೇ ವಾರಣಾಸಿಯಲ್ಲಿ ಅನೇಕರು ಅವರ ಶಿಷ್ಯರಾಗಿದ್ದರು. ಆಮೇಲೆ, ಶ್ರೀ ಶಂಕರರಿಗೆ ಬದರೀನಾಥಕ್ಕೆ ಹೋಗಿ ಬ್ರಹ್ಮಸೂತ್ರಕ್ಕೆ ಭಾಷ್ಯ ರಚಿಸಬೇಕೆಂಬ ಪ್ರೇರಣೆಯಾಯಿತು. ಅದರಂತೆಯೇ ಕಾಶಿ (ಮೋಕ್ಷಪುರಿ) ತೊರೆದು ಆಚಾರ್ಯರು ಶಿಷ್ಯರೊಂದಿಗೆ ಬದರಿಯತ್ತ ಪ್ರಯಾಣ ಮುಂದುವರಿಸಿದರು. ಆ ಯಾತ್ರೆ ಬಹಳ ಕಷ್ಟಕರವಾಗಿತ್ತು. ಕೆಲವೆಡೆಗಳಲ್ಲಿ ಸುಡುಬಿಸಿಲಾದರೆ, ಕೆಲವೆಡೆ ಚಳಿ ತಡೆದುಕೊಳ್ಳುವುದೂ ಅಸಾಧ್ಯವಾಗಿತ್ತು. ಅಲ್ಲಲ್ಲಿ ಅರಣ್ಯ ಮಧ್ಯ ಅಪಾಯಕಾರೀ ತೊರೆಗಳ ಮಧ್ಯ ಅವರು ಸಾಗಬೇಕಿತ್ತು. ಅಲ್ಲದೆ ಹೋಗುವ ಯಾತ್ರಾರ್ಥಿಗಳೊಡನೆ ಅಲ್ಲಲ್ಲಿ ವಿಶ್ರಾಂತಿ ಪಡೆಯುತ್ತಾ ಅವರೆಲ್ಲಾ ಬದರೀನಾಥ ಸೇರಿದರು. ಅಲ್ಲಿ ಅವರಿಗೆ ಬೇಕಾದ ವ್ಯವಸ್ಥೆಯನ್ನು ಜ್ಯೋತಿರ್‌ಮಠದ ರಾಜ ಭಕ್ತಿಪೂರ್ವಕವಾಗಿ ಮಾಡಿದ್ದ. ಅಲ್ಲಿಯ ಸಾಧು ಹಾಗೂ ಸಾಧಕರೊಂದಿಗೆ ಆಚಾರ್ಯರು ವೇದಾಂತದ ವಿಮರ್ಶೆ ಮಾಡಿದರು ಮತ್ತು ಬಾದರಾಯಣದ ವೇದಾಂತ ಸ್ತೋತ್ರಕ್ಕೆ ಭಾಷ್ಯ ರಚಿಸಿದರು. ಮಾತ್ರವಲ್ಲದೆ ಉಪನಿಷತ್ತು ಮತ್ತು ಭಗವದ್ಗೀತೆಯ ಮೇಲಿನ ವಿಮರ್ಶೆ ಬರೆದರು. ಆಗ ಅವರ ಪ್ರಾಯ ಕೇವಲ 12 ವರ್ಷ.

ಆಚಾರ್ಯರ ಶಿಷ್ಯರಲ್ಲಿ ಅತ್ಯಂತ ಕುಶಾಗ್ರಮತಿಯಾದ ಸನಂದನ ಗುರುಗಳ ಬೋಧನೆಗಳನ್ನು ಶೀಘ್ರವಾಗಿ ಮನೋಗತ ಮಾಡಿಕೊಳ್ಳುವವನಾಗಿದ್ದ. ಸ್ವಾಭಾವಿಕವಾಗಿಯೇ, ಇತರ ಶಿಷ್ಯರಿಗೆ ಆ ಬಗ್ಗೆ ಮತ್ಸರವಾಗಿತ್ತು. ಅದನ್ನರಿತ ಆಚಾರ್ಯರು ಶಿಷ್ಯರ ಅಸಮಾಧಾನವನ್ನು ನಿವಾರಿಸಬೇಕೆಂಬ ಉದ್ದೇಶದಿಂದ ಸನಂದನ ಮೇಲ್ಮೆಯನ್ನು ಸಾಬೀತುಪಡಿಸಬೇಕೆಂದು ನಿರ್ಧರಿಸಿದರು. ಅದರಂತೆಯೇ, ಒಮ್ಮೆ ಆಚಾರ್ಯರು ಶಿಷ್ಯರೊಂದಿಗೆ 'ಅಲಕಾನಂದ' ನದಿಯ ದಡದಲ್ಲಿದ್ದಾಗ, ಸನಂದನ ಆ ನದಿಯ ಇನ್ನೊಂದು ಭಾಗದಲ್ಲಿ ಎದುರಿನ ದಡದಲ್ಲಿ ಏನೋ ಕಾರ್ಯನಿರತನಾಗಿದ್ದ, ಆಚಾರ್ಯರು ತಕ್ಷಣ ಬರುವಂತೆ ಸನಂದನನ್ನು ಕೂಗಿದಾಗ, ಗುರುಕರೆಗೆ ಓಗೊಟ್ಟ ಸನಂದನ, ನದೀದಡದ ಸುತ್ತುದಾರಿಯನ್ನು ಬಳಸದೆ, ಸ್ವಲ್ಪವೂ ತಡಮಾಡದೆ ಗುರುಸೇವಾಶಕ್ತಿಯಿಂದ ನದಿಯ ನೀರಿನ ಮೇಲೆ ದಾಪುಗಾಲು ಹಾಕುತ್ತಾ ಬಂದೇಬಿಟ್ಟ! ಆಗ ಆಶ್ಚರ್ಯವೇ ಕಾದಿತ್ತು ಪವಾಡವೇ ನಡೆಯಿತು. ಅವನ ಪಾದಗಳಿಗೆ ಆಧಾರವಾಗಿ ಪದ್ಮಗಳು/ತಾವರೆಗಳು ಉದ್ಭವಿಸಿದವು. ನದಿ ದಾಟುವ ತನಕವೂ ತಾವರೆಗಳ ಆಸರೆ ಅವನಿಗಿತ್ತು. ಏನು ನಡೆದಿತ್ತೆಂಬುದರ ಅರಿವೆಯೇ ಇಲ್ಲದ ಸನಂದನು ಗುರುಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಏನಪ್ಪಣೆಯೆಂದು ಬೇಡಿಕೊಂಡ. ಆಚಾರ್ಯರಿಗೆ ಆಶ್ಚರ್ಯವೂ, ಆನಂದವೂ ಆಗಿ ಅವನನ್ನು "ಪದ್ಮಪಾದ" ಎಂದೇ ಕರೆದರು. ಆ ಪವಾಡವನ್ನು ಕಂಡ ಇತರ ಶಿಷ್ಯರು ಮೂಕಪ್ರೇಕ್ಷಕರಾದರು! ಸನಂದನ ಗುರುಭಕ್ತಿ, ನಿಷ್ಠೆ ಹಾಗೂ ಗುರುಅನುಗ್ರಹಕ್ಕೆ ಇತರ ಶಿಷ್ಯರು ಬೆರಗಾಗಿ, ಅವರ ಮಾತ್ಸರ್ಯಭಾವ ತ್ಯಜಿಸಿ ಪಶ್ಚಾತ್ತಾಪಪಟ್ಟರು.

ಪದ್ಮಪಾದರು ನೃಸಿಂಹ ಉಪಾಸಕರಾಗಿದ್ದರು ಮತ್ತು ನರಸಿಂಹ ಅನುಗ್ರಹದಿಂದ ಅವರಿಗೆ ವಿಶೇಷ ಸಾಧನೆ ಮಾಡಲು ಸಾಧ್ಯವಾಗುತ್ತಿತ್ತು. ಆ ಬಗ್ಗೆ ಅವರ ಸಹಪಾಠಿಗಳು ಕೇಳಿದಾಗ, ಅವರಿಗಾದ ನೃಸಿಂಹ ದರ್ಶನದ ವೃತ್ತಾಂತ ತಿಳಿಸಿದರು. ಅವರ ಪ್ರಕಾರ, ಅವರ ಹಿಂದಿನ ದಿನಗಳಲ್ಲಿ ಅವರು ಬಹಳ ಕಾಲ ಒಂದು ಪರ್ವತ ಪ್ರದೇಶದಲ್ಲಿ ನೃಸಿಂಹ ದರ್ಶನಕ್ಕಾಗಿ ಕಠಿಣ ತಪಸ್ಸನ್ನಾಚರಿಸುತ್ತಿದ್ದರು. ಹಾಗೆಯೇ ಕೆಲಕಾಲ ಕಳೆಯಲು ಆ ಪ್ರದೇಶದಲ್ಲಿ ಸುತ್ತಾಡುತ್ತಿದ್ದ ಓರ್ವ ಶಬರ ಅವರ ಗಮನಕ್ಕೆ ಬಂದ. ಒಂದು ದಿನ ಆ ಬೇಡ, ಮಹಾತ್ಮರೇ, ತಾವು ಓರ್ವರೇ ಈ ಅರಣ್ಯ ಪ್ರದೇಶದಲ್ಲಿ ಏನು ಮಾಡುತ್ತಿದ್ದೀರಿ? ನೀವು ಯಾರು? ನಿಮ್ಮ ಉದ್ದೇಶವೇನು? ಇತ್ಯಾದಿಯಾಗಿ ಪ್ರಶ್ನಿಸಿದ. ಅದಕ್ಕೆ ಪದ್ಮಪಾದರು, ಅವರು ಮಾನವ ದೇಹದ, ಸಿಂಹದ ಶಿರವಿರುವ ವ್ಯಕ್ತಿಗಾಗಿ ತಪಸ್ಸು ಮಾಡುತ್ತಿರುವುದೆಂದೂ, ಅವನನ್ನು ಕಾಣುವುದೇ ಗುರಿಯೆಂದೂ ಹೇಳಿದರು. ಅದಾಗಿ ಕಣ್ಮರೆಯಾದ ಬೇಡನು ಸ್ವಲ್ಪ ಸಮಯದಲ್ಲಿಯೇ ಅವರಿಗೆ ಬೇಕಾದ ಆ ಮಾನವ ದೇಹದ ಸಿಂಹದ ತಲೆಯ ವ್ಯಕ್ತಿಯನ್ನು ಕಾಡುಬಳ್ಳಿಯಿಂದ ಬಂಧಿಸಿ ತಂದೇ ಬಿಟ್ಟ. ಅವನೇ ಪದ್ಮಪಾದರಿಗೆ ಬೇಕಾಗಿದ್ದ ನರಸಿಂಹ. ಪದ್ಮಪಾದರು ಭಕ್ತಿಯಿಂದ ಭಾವಪರವಶರಾಗಿ, ಸಾಷ್ಟಾಂಗ ಎರಗಿದರು. ಅವರಿಗೆ ನೃಸಿಂಹಾನುಗ್ರಹವಾಯಿತು. ನರಸಿಂಹ ಹಾಗೂ ಬೇಡ ಇಬ್ಬರೂ ಮಾಯವಾದರು. ('Shankara vijaya' P. 243-45)

ಶ್ರೀ ಶಂಕರರು ಬದರೀನಾಥದಲ್ಲಿ ಅವರ ಭಾಷ್ಯಗ್ರಂಥಗಳ ರಚನೆಯಾದ ಮೇಲೆ ಅಲ್ಲಿಂದ ಶಿಷ್ಯರೊಂದಿಗೆ ಹಿಂದಿರುಗುತ್ತಾ, ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಾ, ದೇಶ ಪರ್ಯಟನೆ ಮಾಡುತ್ತಾ, ಮಹಾರಾಷ್ಟ್ರದ ಮೂಲಕ ಶ್ರೀಶೈಲಕ್ಕೆ ಬಂದರು. ಅಲ್ಲಿ ತಂಗಿರುವಾಗ ಕಪಾಲಿಕ ಪಂಥದವರಿಗೂ, ಆಚಾರ್ಯರಿಗೂ ವಾದವಾಗಿ ಕಪಾಲಿಕರು ಸೋತುಹೊದರು. ಆದರೆ ಅವರು ಪ್ರತೀಕಾರ ತೀರಿಸುವುದಕ್ಕಾಗಿ ಕಪಾಲಿಕರ ಒಡೆಯನ ಆಜ್ಞೆಯಂತೆ ಆಚಾರ್ಯರ ಹತ್ಯೆಗೆ ಸಂಚು ರೂಪಿಸಿದರು. ಅವರಲೊಬ್ಬ ಸನ್ಯಾಸಿ ವೇಷದಲ್ಲಿ ಬಂದು, ಆಚಾರ್ಯರನ್ನು ನಾನಾ ರೀತಿಯಲ್ಲಿ ಪ್ರಶಂಸಿಸುತ್ತಾ. ಅವನಿಗೆ ಕೃಪೆತೋರಿ ಅವನ ಕೋರಿಕೆಯನ್ನು ಈಡೇರಿಸಿಕೊಡಬೇಕಾಗಿ ಬೇಡಿಕೊಂಡ. ಅದರ ಪ್ರಕಾರ, ಅವನ ನೂರು ವರ್ಷಗಳ ಕಾಲದ ತಪಸ್ಸಿನ ಫಲವಾಗಿ ಕಪಾಲೀಶಿವ ಪ್ರತ್ಯಕ್ಷನಾಗಿ, ಅವನ ಕೈಲಾಸಪ್ರಾಪ್ತಿಗಾಗಿ ಓರ್ವ ಮಹಾಸಂತನ ಶಿರವನ್ನು ಬಲಿಕೊಡಬೇಕೆಂದು ಆಜ್ಞಾಪಿಸಿದ್ದ ಎಂದ, ಶ್ರೀ ಶಂಕರರ ಜ್ಞಾನದೃಷ್ಟಿಗೆ ಆ ಕಪಟಿಯ ಕಾರಸ್ಥಾನ ತಿಳಿಯದಿರಲಿಲ್ಲ ಮತ್ತು ಕಾಲವೇ ಅದಕ್ಕೆ ಉತ್ತರಿಸುವುದೆಂದೂ ಅವರು ತಿಳಿದಿದ್ದರು. ಆ ಕಪಟ ಪಟುವಿಗೆ ಮಾತ್ರ ಆಚಾರ್ಯರ ತಪೋಶಕ್ತಿಯ ಮಹಿಮೆ ತಿಳಿಯದಾಗಿತ್ತು. ಅವನ ಕೋರಿಕೆಗಾಗಿ ಜೀಮೂತವಾಹನನಂತೆ, ದಧೀಚಿಯಂತೆ ತ್ಯಾಗಮಾಡಿ ಶಿರನೀಡಬೇಕೆಂದು, ಅತ್ಯಂತ ದಯಾಪರರಾದ ಆಚಾರ್ಯರು ಅದಕ್ಕೆ ಸಮ್ಮತಿಸಿದರು. ಹಾಗೆಯೇ ಆ ದಿನ ಬಂದಾಗ ಆಚಾರ್ಯರು ಯಾರಿಗೂ ತಿಳಿಯದಂತೆ ಆ ಮೊದಲೇ ಗೊತ್ತುಪಡಿಸಿದ ತಾಣಕ್ಕೆ ಒಬ್ಬಂಟಿಗರಾಗಿ ಹೋದರು. ಅಲ್ಲಿ ಕಪಾಲಿಕ ಉಗ್ರಭೈರವ ಕೈಯಲ್ಲಿ ತ್ರಿಶೂಲಹಿಡಿದು, ರುಂಡಮಾಲೆ ಧರಿಸಿ, ಎಲುಬಿನ ಮಾಲೆಯನ್ನು ಕಟ್ಟಿಕೊಂಡು ಭಯಾನಕ ಚರ್ಯೆಯವನಾಗಿ ಆಚಾರ್ಯರ ಶಿರಚ್ಛೇದವ ಮಾಡಲು ಅಣಿಯಾದ. ಆಚಾರ್ಯರಾದರೋ ಪದ್ಮಾಸನದಲ್ಲಿ ಧ್ಯಾನಾಸಕ್ತರಾಗಿ, 'ನಿರ್ವಿಕಲ್ಪ ಸಮಾಧಿ' ಸ್ಥಿತಿಯಲ್ಲಿದ್ದರು. ಆ ಗಳಿಗೆ ಬಂದಾಗ, ಖಡ್ಗ ಹಿಡಿದು ಆಚಾರ್ಯರ ರುಂಡ ಬೇರ್ಪಡಿಸಲು ಉಗ್ರ ಭೈರವ ಧಾವಿಸಿದ.

ಪದ್ಮಪಾದರಿಗೆ ಮಧ್ಯರಾತ್ರಿಯಲ್ಲಿ ನಿದ್ರಾಭಂಗವಾಗಿ ಏನೋ ಪ್ರೇರಣೆಯಾಯಿತು. ಗುರುಗಳನ್ನು ಶ್ರದ್ಧೆ, ನಿಷ್ಠೆ ಮತ್ತು ಭಕ್ತಿಯಿಂದ ಸೇವೆಮಾಡುತ್ತಿದ್ದ ಪದ್ಮಪಾದರಿಗೆ ಆ ಭೀಕರ ಕಪಾಲಿಕನ ರಣೋತ್ಸಾಹದ ದೃಶ್ಯ ಜ್ಞಾನದೃಷ್ಟಿಯಿಂದ ಕಂಡುಬಂತು. ನೃಸಿಂಹಾನುಗ್ರಹವಾಗಿದ್ದ ಅವರಿಗೆ ಮಂತ್ರಸಿದ್ಧಿಯಾಗಿತ್ತು. ಆ ಮಂತ್ರ ಪ್ರಭಾವದಿಂದಾಗಿ ಪದ್ಮಪಾದರಲ್ಲಿ ನೃಸಿಂಹ ಪ್ರವೇಶವಾಯಿತು. ಅದೇ ಪದ್ಮಪಾದರ 'ನರಸಿಂಹಾವತಾರ'. ಭಕ್ತಪ್ರಹ್ಲಾದನ ಕರೆಗೆ ಓಗೊಟ್ಟ ನರಸಿಂಹ ದುಷ್ಟದೈತ್ಯನ ಸೀಳಿದಂತೆಯೇ, ಪದ್ಮಪಾದರಿಗೊಲಿದ ನೃಸಿಂಹ ಕ್ಷಣಮಾತ್ರದಲ್ಲಿ ಕಪಾಲಿಕ ಉಗ್ರಭೈರವನನ್ನು ಕೆಡವಿ, ನಖಪ್ರಯೋಗದಿಂದ ಅವನ ಎದೆಸೀಳಿ, ಹೊರಚಾಚಿದ ಹಲ್ಲುಗಳಿಂದ ಕಚ್ಚಿ, ಅವನನ್ನೆತ್ತಿ ಭಯಂಕರವಾಗಿ ಗರ್ಜಿಸಿದ. ಸಮಾಧಿಸ್ಥಿತಿಯಲ್ಲಿದ್ದ ಶ್ರೀ ಶಂಕರರು ಎದ್ದು ಭಕ್ತಿಯಿಂದ ನರಸಿಂಹ ಸ್ತುತಿಮಾಡಿದಾಗ ನರಸಿಂಹಾವತಾರ ಶಾಂತವಾಗಿ ಪದ್ಮಪಾದರು ಮೊದಲಿನಂತಾದರು.

ಇನ್ನೊಂದು ಹೇಳಿಕೆಯೆಂತೆ (Shankara, Missionary Central Chinmaya Trust, Mumbai - 1998) ಶ್ರೀ ಶಂಕರರು ಶ್ರೀಶೈಲದಲ್ಲಿದ್ದಾಗ, ಕಪಾಲಿಕರು ವಾದದಲ್ಲಿ ಸೋತು, ಉಗ್ರಭೈರವನ (ಕಪಟಿ ಕಪಾಲಿಕ) ಮೂಲಕ ಶ್ರೀ ಶಂಕರರ ಹತ್ಯಗೆ ಸಂಚು ರೂಪಿಸಿದರು. ಹಾಗೆಯೇ ಆತ ಆಚಾರ್ಯರ ಬಳಿಬಂದು, ಶಿಷ್ಯನಾಗಿ ಸೇರಿ ದೈವೇಚ್ಛೆಯಂತೆ ಶಿವೈಕ್ಯನಾಗಲು ಆಚಾರ್ಯರ ಬಲಿದಾನವಾಗಬೇಕೆಂದು ಬೇಡಿಕೊಂಡರು. ಆ ವಿಚಿತ್ರ ಅಪೇಕ್ಷೆಯ ಮರ್ಮವನ್ನರಿತ ಆಚಾರ್ಯರು ಅದಕ್ಕೂ ಸಮ್ಮತಿಸಿ, ಯಾರಿಗೂ ತಿಳಿಸದೆ ಆ ನಿಶ್ಚಿತ ದಿನದಂದು ಮಧ್ಯರಾತ್ರಿಯಲ್ಲಿ ಕಪಾಲಿಕರಿದ್ದಲ್ಲಿಗೆ ಹೋದರು. ಆ ಸಮಯದಲ್ಲಿ ಪದ್ಮಪಾದರಿಗೆ ಏನೋ ಪ್ರೇರಣೆಯಾಗಿ, ಗುರುಗಳನ್ನು ಕಾಣದಾಗ ನರಸಿಂಹ ಧ್ಯಾನ ಮಾಡಿದರು. ಪದ್ಮಪಾದರು ನರಸಿಂಹನಾಗಿಯೇ ಪರಿವರ್ತನೆಯಾದರು. ಕಪಾಲಿಕರು ಶ್ರೀ ಶಂಕರರನ್ನು ಬಲಿಪೀಠಕೊಯ್ದು ಅವರ ಶಿರಚ್ಛೇದನ ಮಾಡಲು ಅನುವಾಗಿದ್ದರು. ಅಲ್ಲಿಯೇ ಉಗ್ರನರಸಿಂಹ ಪ್ರತ್ಯಕ್ಷನಾಗಿ (ಪದ್ಮಪಾದರು) ಉಗ್ರ ಭೈರವನ ತಲೆ ತುಂಡರಿಸಿ ಬಲಿಪೀಠಕ್ಕೆ ಅರ್ಪಿಸಿ ಘರ್ಜಿಸಿದರು. ಉಳಿದ ಕಪಾಲಿಕರೆಲ್ಲಾ ಪಲಾಯನಗೈದರು. ಶ್ರೀ ಶಂಕರರು ನೃಸಿಂಹಸ್ತೋತ್ರ ಹೇಳಿದಾಗ ಉಗ್ರನರಸಿಂಹ ಶಾಂತವಾಗಿ, ಪ್ರಸನ್ನನಾಗಿ, ಪುನಃ ಪದ್ಮಪಾದರಾಗಿ ರೂಪತಾಳಿದರು. ನರಸಿಂಹ ಅಂತರ್ಧಾನವಾದಾಗ ಪದ್ಮಪಾದರು ಮೊದಲಿನಂತಾಗಿ ಆಚಾರ್ಯರಿಗೆ ಎರಗಿದರು. 'ಪದ್ಮಪಾದರ ನರಸಿಂಹಾವತಾರ' ಆಸ್ತಿಕರ ಪಾಲಿನ ಪುಣ್ಯಕಥಾನಕ.

**– ಕೃಪೆ : 'ಶ್ರೀ ಶಂಕರಕೃಪಾ'**

## ಜ್ಞಾನ - ನುಡಿ

ಪ್ರತಿಯೊಂದು ಸಮಸ್ಯೆಗೂ ಉತ್ತರ ಇರುತ್ತದೆ. ಈ ನಂಬಿಕೆ ಇದ್ದಾಗ ಪ್ರತಿಯೊಂದು ಕಷ್ಟಕ್ಕೂ ಪರಿಹಾರವಿದೆ. **– ಆಲೂರು ವೆಂಕಟರಾಯ**

## ಜ್ಞಾನ - ಗಾದೆ

- ನಾಯಿಗ್ ನಾಯಿ ಪಗೆ; ಜಾತಿಗ್ ಜಾತಿ ಪಗೆ
- ನಾಯಿಡ ಪಂಡ ನಾಯಿತ ಬೀಲೊಗ್ ಪಂಡಿಲೆಕ್ಕ
- ನಾಯಿ ಇದ್ಯಾಂತ್‌ನ ಊರುಡ್ ಕುದ್ಕನನೇ ದರ್ಬಾರ್

## ಜ್ಞಾನ - ನಗೆ

**ಸುಬ್ಬ :** ಏನೋ ಗುಂಡ, ನಿನ್ ಮಗಳ ಮದುವೆ ಮತ್ತೆ ಮುಂದೆ ಹೋಯಿತಂತೆ?

**ಗುಂಡ :** ಅಯ್ಯೋ ಎಲ್ಲ ನನ್ ಗ್ರಹಚಾರ, ನಮ್ ಭಾವೀ ಅಳಿಯ ಕೋರ್ಟ್‌ನಲ್ಲಿ ಲಾಯರು. ಹಿಯರಿಂಗ್ ಮುಂದೆ ಹಾಕಿ ಹಾಕಿ ಅಭ್ಯಾಸ ಅದೇ ರೀತಿ ನಮ್ಮ ಮಗಳ ಮದುವೇನೂ!

## ಜ್ಞಾನ - ವಿಸ್ಮಯ

ಚೇಳುಗಳು ಆಹಾರವಿಲ್ಲದೆಯೇ 6ರಿಂದ 12 ತಿಂಗಳ ಕಾಲ ಹಾಗೆಯೇ ಬದುಕಿರುತ್ತವೆ ! ಚೇಳಿನ ಮೊಟ್ಟೆಗಳು ಒಡೆದು ಮರಿಗಳಾದ ಮೇಲೆ ಅವು ತಾಯಿ ಚೇಳಿನ ಬೆನ್ನಿನ ಮೇಲೇರಿಕೊಂಡು ಸಾಗುತ್ತವೆ! ಚೇಳಿನ ಬೆನ್ನು ಬಿರಿದು ಮರಿಗಳು ಹೊರಬರುತ್ತವೆಯೆಂಬ ತಪ್ಪುಕಲ್ಪನೆ ಇದೆ. ಆದರೆ ಚೇಳಿನ ಬೆನ್ನುಗಳ ಮೇಲೆ ಕಣ್ಣು ಇರುತ್ತದೆ !

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)


# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ 'ಶಿವಸದನ' ವಿಸ್ತೃತ ಕಟ್ಟಡದ ಉದ್ಘಾಟನಾ ಸಮಾರಂಭ







ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ 'ಶಿವಸದನ' ವಿಸ್ತೃತ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. 14–11–2021ರ ರವಿವಾರದಂದು ನೆರವೇರಿತು. ದೀಪಪ್ರಜ್ವಲನೆ, ದಾನಿಗಳ ಹೆತ್ತವರ ಭಾವಚಿತ್ರ ಅನಾವರಣ ಬಳಿಕ ಸಭಾ ಕಾರ್ಯಕ್ರಮ ನಡೆಯಿತು. ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್ ಇವರ ಪ್ರಾರ್ಥನೆಯ ಬಳಿಕ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಸ್ವಾಗತಿಸಿ ಪ್ರಸ್ತಾವನೆಗೈದರು. ಕಬಕ ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀ ವಿನಯ್ ಕುಮಾರ್ ಕಲ್ಲೇಗ, ದಾನಿಗಳಾದ ಶ್ರೀ ರಾಮಭವನ ವಿಶ್ವನಾಥ ಶೇನ್ಯ್, ಉಡುಪಿಯ ಶಸ್ತ್ರಚಿಕಿತ್ಸಾ ತಜ್ಞರಾದ ಡಾ। ವೈ. ಸುದರ್ಶನ್ ರಾವ್, ಭಾರತ್ ಬಿಲ್ಡರ್ಸ್ ಮ್ಹಾಲಕರಾದ ಶ್ರೀ ಪ್ರಫುಲ್ಲಚಂದ್ರ ರಾವ್ ಶುಭಾಶಂಸನೆಗೈದರು. ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾದ ಕೋಶಾಧಿಕಾರಿ ಶ್ರೀ ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರು


Follow us on :

BUILDING DREAMS, ENHANCING LIVES

Experience our Unique Projects at a Prime Localities of Mangalore

27 YEARS OF MILESTONE

Land® Trades
BUILDERS & DEVELOPERS



Premium Apartments, World Class amenities, Landscaped Garden, CRISIL 7 Star Rated Project

SOLITAIRE
Experience the difference

Hathill, Chilimbi

Club House | High Rise Tower
2,3,4 & 5 BHK Luxury Homes

Affordable Homes at Derebail, Mangalore

HABITAT ONE 54
An Urban Lifestyle

1 & 2 BHK RESIDENCES
FROM ₹30 LAKHS (All Inclusive)





NEWLY LAUNCHED PROJECT

NAKSHATRA
Gandhinagar, Mannagudda

G+14 Storey | 50 Exclusive Apartments | 2&3 BHK Premium Homes

Construction : MFAR CONSTRUCTIONS

Developers CRISIL Rating : DA2

8882 777 444
Email : sales@landtrades.in

Corporate Office: Milestone25", 5th Floor, Collectors Gate Junction, Balmatta, Mangalore, Karnataka 575002 | +91 824 2425424, 2423866, 2445840

CREDAI MANGALORE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3

Editor : Sri M. S. Raghunath Rao, Darbe, Puttur    Printed at : Rajesh Power Press, Darbe - 574 202, Puttur, D. K.